ಕರಾಸಕೈಅನಿನಿ
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮ್ಯೆಲ್:kssidcho@vsnl.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಬಾಡಿಗೆ ಪರಿಷ್ಕರಣೆ:ಮ:ಗೋ:ಫ್ಲ್ಯಾಟ್:2001/ 1493 ದಿನಾಂಕ: 08-02-2021

## ಕಛೇರಿ-ಆದೇಶ

ವಿಷಯ: ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿರುವ ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳ ಬಾಡಿಗೆ ದರವನ್ನು ಪರಿಷ್ಕರಿಸಿ ನಿಗದಿಪಡಿಸುವ ಬಗ್ಗೆ.

ಉಲ್ಲೇಖ: ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಬಾಡಿಗೆ ಪರಿಷ್ಕರಣೆ:ಮ:ಗೋ: ಫ್ಲ್ಯಾಟ್:2001/2239 ದಿನಾಂಕ 09-01-2020

**************

ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖಿತ ಕಛೇರಿ ಆದೇಶದಲ್ಲಿ ನಿಗಮದ ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳಿಗೆ ನಿಗದಿಪಡಿಸಲಾಗಿದ್ದ ಬಾಡಿಗೆ ದರದ ಮೇಲೆ ಶೇಕಡಾ 10 ರಷ್ಟು ಹೆಚ್ಚಳ ಮಾಡಿ, ಬಾಡಿಗೆ ದರವನ್ನು ದಿನಾಂಕ 01.01.2020 ರಿಂದ 30.11.2020ರವರೆಗಿನ 11 ತಿಂಗಳ ಅವಧಿಗೆ ಪರಿಷ್ಕರಣೆ ಮಾಡಲಾಗಿತ್ತು. ಅಂತೆಯೇ ಸದರಿ ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳ ಹಾಲಿ ಬಾಡಿಗೆ ದರದ ಪರಿಷ್ಕರಣೆ ದರವು ದಿನಾಂಕ 30.11.2020ಕ್ಕೆ ಅಂತ್ಯಗೊಂಡಿದ್ದು, ದಿನಾಂಕ 29.01.2013 ರಂದು ಜರುಗಿದ ನಿಗಮದ 325ನೇ ಆಡಳಿತ ಮಂಡಳಿ ನಿರ್ಣಯದನ್ವಯ, ಪ್ರಸಕ್ತ ಸಾಲಿನ ಬಾಡಿಗೆ ದರದ ಮೇಲೆ ಶೇಕಡ 10ರಷ್ಟು ಹೆಚ್ಚಳ ಮಾಡಿ **ದಿನಾಂಕ 01.12.2020 ರಿಂದ 31.10.2021ರವರೆಗೆ** (11 ತಿಂಗಳು ಅವಧಿಯವರೆಗೆ ಮಾತ್ರ) 'ಬಾಡಿಗೆ ದರ'ವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿಗದಿಪಡಿಸಲಾಗಿದೆ.

| ಕ್ರ ಸಂ. | ಸ್ಥಳ | ಬಾಡಿಗೆ ದರ ಪ್ರತಿ ತಿಂಗಳು ಪ್ರತಿ ಚ.ಮೀ.ಗಳಿಗೆ (ರೂ.ಗಳಲ್ಲಿ) | |
|---|---|---|---|
| | | 01.01.2020ರಿಂದ 30.11.2020ರವರೆಗೆ (ಚಾಲ್ತಿಯಲ್ಲಿದ್ದಂತೆ) | 01.12.2020ರಿಂದ 31.10.2021ರವರೆಗೆ (ಪರಿಷ್ಕೃತ ದರ) |
| 1. | ಬೆಂಗಳೂರು ನಗರ<br>ರಾಜಾಜಿನಗರ, ದ್ಯಾವಸಂದ್ರ, ಹೆಚ್.ಎ.ಎಲ್, ವಿದ್ಯುನ್ಮಾನನಗರ, ಎನ್.ಜಿ.ಇ.ಎಫ್, ಬೊಮ್ಮಸಂದ್ರ-1,2,3. ಕುಂಬಳಗೂಡು, ಯಲಹಂಕ. | 117.00 | 129.00 |
| 2. | ಬೆಂಗಳೂರು ಗ್ರಾಮಾಂತರ<br>ದೊಡ್ಡಬಳ್ಳಾಪುರ, ರಾಮನಗರ, ಹೊಸಕೋಟೆ, ಜಿಗಣಿ-1,2. | 31.00 | 34.00 |
| 3. | ಪೀಣ್ಯಾ/ವಿದ್ಯುನ್ಮಾನ ನಗರ/ರಾಜಾಜಿನಗರ/ ಕೈವ.ಗಳಲ್ಲಿನ ಬಹುಮಹಡಿ ಮಳಿಗೆಗಳಿಗೆ | 261.00 | 287.00 |
| 4. | ಹುಬ್ಬಳ್ಳಿ/ಮೈಸೂರು/ಮಂಗಳೂರು/ಬೆಳಗಾವಿ | 74.00 | 81.00 |
| 5. | ಇತರೆ ಜಿಲ್ಲಾ ಕೇಂದ್ರಗಳು | 58.00 | 64.00 |
| 6. | ಇತರೆ ಸ್ಥಳಗಳು | 31.00 | 34.00 |

ನಿಗಮದ ವತಿಯಿಂದ ಇತರೆ ಸ್ಥಳಗಳಲ್ಲಿ ಹೊಸದಾಗಿ ನಿರ್ಮಾಣ ಮಾಡುವ ಮಳಿಗೆ/ಬಹುಮಹಡಿ ಕಟ್ಟಡಗಳ ಮಳಿಗೆಗಳಿಗೆ ಬಾಡಿಗೆ ದರವನ್ನು ಪ್ರತ್ಯೇಕವಾಗಿ ನಿಗಧಿಪಡಿಸಲಾಗುವುದು.

ನಿಗಮದಿಂದ ಬಾಡಿಗೆ ಆಧಾರದ ಮೇಲೆ ಹಂಚಿಕೆಯಾದ ಮಳಿಗೆಗಳ ಹಂಚಿಕೆದಾರರಿಗೆ ಅವರಿಗೆ ಹಂಚಿಕೆಯಾದ ಆಯಾ ಮಳಿಗೆಯ **'ಒಳ-ಆವರಣದ' (Carpet Area)** ವಿಸ್ತೀರ್ಣಕ್ಕೆ ಮಾತ್ರ ಬಾಡಿಗೆ ದರವನ್ನು ವಿಧಿಸತಕ್ಕದ್ದು.

ಅಂತೆಯೇ, ಸಣ್ಣ ಪ್ರಮಾಣ ಕೈಗಾರಿಕೇತರ ಘಟಕಗಳಿಗೆ ಬಾಡಿಗೆ ಯೋಜನೆ ಅಡಿಯಲ್ಲಿ ಹಂಚಿಕೆ ಮಾಡಲಾಗುವ ಹೊಸ ಮಳಿಗೆಗಳು/ಬಹುಮಹಡಿ ಮಳಿಗೆಗಳಿಗೆ ಪ್ರಚಲಿತ ದರ + ಶೇ.20 ರಷ್ಟು ಬಾಡಿಗೆ ವಿಧಿಸತಕ್ಕದ್ದು.

ಆದರೆ, ಗೋದಾಮನ್ನು ಉಗ್ರಾಣವನ್ನಾಗಿ ಉಪಯೋಗಿಸದೇ ಇದ್ದಲ್ಲಿ, ಪರಿಷ್ಕೃತ ಬಾಡಿಗೆ ದರದ **ಒಂದೂವರೆ ಪಟ್ಟು** ಬಾಡಿಗೆ ವಸೂಲಿ ಮಾಡತಕ್ಕದ್ದು. ವಾಣಿಜ್ಯ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿದ್ದಲ್ಲಿ **ದುಪ್ಪಟ್ಟು (Double)** ಬಾಡಿಗೆ ವಿಧಿಸಿ ವಸೂಲಿ ಮಾಡತಕ್ಕದ್ದು. ಮುಂದುವರೆದು, ಪ್ರತಿ 11 ತಿಂಗಳ ನಿಗಧಿತ ಅವಧಿಯು ಪೂರ್ಣಗೊಂಡ ಕೂಡಲೇ ಸದರಿ ಬಾಡಿಗೆ ದರದ ಶೇ.10ರಷ್ಟು ಹೆಚ್ಚಳಗೊಳಿಸತಕ್ಕದ್ದು.

ಬಾಡಿಗೆ ಲೆಕ್ಕ ಹಾಕುವಾಗ ಪೈಸೆಗಳು ಬಂದಲ್ಲಿ ಮೊಬಲಗನ್ನು ಮುಂದಿನ ರೂಪಾಯಿಗೆ ಪೂರ್ಣಾಂಕಗೊಳಿಸತಕ್ಕದ್ದು.

ಮೇಲೆ ಸೂಚಿಸಲಾಗಿರುವ ಆದೇಶಗಳನ್ನು ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

19/02/2021

(ಡಾ.ವಿ.ರಾಮ ಪ್ರಸಾಥ್ ಮನೋಹರ್, ಭಾ.ಆ.ಸೇ)
**ವ್ಯವಸ್ಥಾಪಕ ನಿರ್ದೇಶಕರು**

**ಅವರಿಗೆ,**

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ದಾವಣಗೆರೆ/ಮಂಗಳೂರು/ಬಳ್ಳಾರಿ.

**ಪ್ರತಿ:**

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ, ಭೂಸ್ವಾಧೀನ), ಕರಾಸಕೈಅನಿನಿ, ಬೆಂಗಳೂರು
2. ಅಧೀಕ್ಷಕ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು) / (ಆ.ಲೆ.ಪ) / ವಲಯ-1 / ವಲಯ-2, ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ವ&ಕಾಲೆ) / (ಸಿಬ್ಬಂದಿ) / (ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಾರ್ಯಪಾಲಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಕಲಬುರಗಿ,
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಮೈಸೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಬಳ್ಳಾರಿ.
7. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು
8. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
9. ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
10. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು
11. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.